## **ಮೈಕ್ರೋಸಾಫ್ಟ್ ಪವರ್ ಪಾಯಿಂಟ್ ತಂತ್ರಾಂಶ:**

ವಿಜ್ಞಾನ, ವಾಣಿಜ್ಯ ವಿಷಯಗಳನ್ನು ಮಂಡಿಸಲು, ತರಗತಿಯಲ್ಲಿ ಪಾಠ ಬೋಧಿಸಲು ನಕ್ಷೆಗಳು ಕೋಷ್ಟಕಗಳು, ಚಿತ್ರಗಳು ಇತ್ಯಾದಿಗಳು ಬೇಕಾಗುತ್ತವೆ, ಯವುದೆ ವಿಷಯವನ್ನು ಪ್ರಸ್ತುತ ಪಡಿಸಲು ಸಭೆ ಸಮ್ಮೇಳನಗಳಲ್ಲಿ. ವಿಷಯ ಮಂಡಿಸಲು ಮತ್ತು ಜಾಲಪುಟಗಳನ್ನು ತಯಾರಿಸಲು ಅನುಕೂಲಗಳನ್ನು ಒದಗಿಸುವ ತಂತ್ರಾಂಶವೆ ಪವರ್ ಪಾಯಿಂಟ್ ತಂತ್ರಾಂಶ.

**ಪವರ್ ಪಾಯಿಂಟ್ ತಂತ್ರಾಂಶ** (ಪಿ.ಪಿ.ಟಿ) ಮುಖ್ಯ ಲಕ್ಷಣಗಳು:

1. ಪವರ್ ಪಾಯಿಂಟ್‌ನಲ್ಲಿ ತಯಾರಿಸಿದ ಪ್ರಸ್ತುತಿಗಳು (Presentations) ಆಗುತ್ತದೆ.
2. ಪವರ್ ಪಾಯಿಂಟ್ ಕಡತಗಳಲ್ಲಿರುವ ಪುಟಗಳು ಅಥವಾ ತೆರೆಗಳು ಜಾರುಫಲಕವಾಗುತ್ತದೆ.
3. ಗಣಕತೆರೆಯಮೆಲೆ ಜಾರುಫಲಕದ ಪ್ರದರ್ಶನವನ್ನು (ಸಲಿದ ಸಹೊಡ)(Slide Show) ಎನ್ನುತ್ತಾರೆ.
4. ಜಾರುಫಲಕ ಪ್ರದರ್ಶನದ ಸಮಯದಲ್ಲಿ ಜಾರುಫಲಕಗಳನ್ನು ಮತ್ತು ಅವುಗಳಲ್ಲಿ ಅಳವಡಿಸಿರುವ ಪಠ್ಯ, ಚಿತ್ರ, ದ್ವನಿ ಮತ್ತು ಚಲನಚಿತ್ರ ತುಣುಕುಗಳನ್ನು ಸೂಕ್ತ ಉಪಕರಣಗಳನ್ನು ಬಳಸಿ ಅನೇಕ ರೀತಿಯಲ್ಲಿ ನಿಯಂತ್ರಿಸಬಹುದು.

**ಪವರ್ ಪಾಯಿಂಟ್ ತೆರೆಯುವ ಕ್ರಮ.**

ಪವರ್ ಪಾಯಿಂಟ್ ತೆರೆಯಲು



**ಪವರ್ ಪಾಯಿಂಟ್ ತೆರೆಯುವ ಕ್ರಮ.**

ಹೊಸ ಪ್ರಸ್ತುತಿ ಪ್ರಾರಂಭಿಸಲು ಸಂವಾದ ಜಾಕದಲ್ಲಿ ಮೂರು ಆಯ್ಕೆಗಳಿರುತ್ತದೆ, ಅವುಗಳು

1. ಸ್ವಯಂವಿವರ ನೀಡಿಕೆ ನಿಪುಣ (Auto Content Wizard)
2. ವಿನ್ಯಾಸಿತ ಪುಟ (Design Template)¸
3. ಖಾಲಿ ಪ್ರಸ್ತುತಿ Blank Presentation

**ಪವರ್ ಪಾಯಿಂಟ್ ತೆರೆಯುವ ಕ್ರಮ.**



**ಸ್ವಯಂವಿವರ ನೀಡಿಕೆ ನಿಪುಣ (Auto Content Wizard)**

ಈ ವಿಧಾನದಲ್ಲಿ ಹೊಸದಾಗಿ ಪ್ರಸ್ತುತಿಯನ್ನು ತಯಾರಿಸುವವರಿಗೆ.




ಅನೇಕ ವಿಧದ ಸಹಾಯ ದೊರೆಯುತ್ತದೆ.

**ವಿನ್ಯಾಸಿತ ಪುಟ (Design Template)¸**

ಈ ವಿಧಾನದಲ್ಲಿ ತಯಾರಿಸಿರುವ ವಿಶೇಷ ವಿನ್ಯಾಸ, ಬಣ್ಣ, ಹಿನ್ನಲೆ ಮತ್ತು ಅಕ್ಷರಶೈಲಿಗಳನ್ನು ಹೊಂದಿರುವ ಅನೇಕ ಸಿದ್ಧವಿನ್ಯಾಸ ಪುಟಗಳು (Templates) ದೊರೆಯುತ್ತವೆ.




**ಖಾಲಿ ಪ್ರಸ್ತುತಿ Blank Presentation**

ಖಾಲಿ ಪ್ರಸ್ತುತಿ Blank Presentation ಬಳಕೆದಾರರು ತಾವೇ ವಿನ್ಯಾಸ, ಬಣ್ಣ, ಹಿನ್ನಲೆ ಮತ್ತು ಅಕ್ಷರಶೈಲಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ವಿಧಾನದಲ್ಲಿ ನಿಪುಣರಿಗೆ ವೈಯಕ್ತಿಕತೆಯನ್ನು ಪ್ರದರ್ಶಿಸುವ ಅವಕಾಶವಿದೆ.



ವಿಧಾನಗಳಿರುವ ಕೆಲವು ಸಮಾನ ಅಂಶಗಳು

1. ಶೀರ್ಷಿಕೆ(Title) ಮತ್ತು ಉಪಶೀರ್ಷಿಕೆ(Subtitle)
2. ಪಠ್ಯ
3. ಚಿತ್ರಗಳು
4. ರೇಖಾಚಿತ್ರಗಳು
5. ನಕ್ಷೆಗಳು
6. ಶಿರೋಲೇಖ(Header)ಮತ್ತು ಪಾದಲೇಖ(Footer)
7. ಟಿಪ್ಪಣಿಗಳು
8. ರೂಪರೇಖೆಗಳು(Outlines)

**ಪವರ್ ಪಾಯಿಂಟ್ ತೆರೆಯ ಅಂಶಗಳು:**
ಶೀರ್ಷಿಕೆ ಪಟ್ಟಿಕೆ: ಅನ್ವಯಿಕದ ಹೆಸರು ಅಂದರೆ ಮೈಕ್ರೋಸಾಫ್ಟ್ ಪವರ್ ಪಾಯಿಂಟ್ ಮತ್ತು ಆ ಸಮಯದಲ್ಲಿ ತೆರೆದಿರುವ ಪ್ರಸ್ತುತಿಯ ಹೆಸರು ಕಾಣಿಸುತ್ತದೆ.
ಪರಿವಿಡಿ ಪಟ್ಟಿಕೆ: ಕಡತ, ಸಂಪಾದನೆ, ನೋಟ, ಸೇರಿಸು, ವಿನ್ಯಾಸ, ಉಪಕರಣಗಳು, ಜಾರುಫಲಕ ಪ್ರದರ್ಶನ, ಕಿಟಕಿ, ಸಹಾಯ ಉಪಪರಿವಿಡಿಗಳಿರುತ್ತದೆ.

**ಉಪಕರಣ ಪಟ್ಟಿಕೆ:**
ಸಾಮಾನ್ಯವಾಗಿ ಆಫೀಸ್ ತಂತ್ರಾಂಶದ ಇತರೆ ಅನ್ವಯಿಕಗಳಲ್ಲಿರುವ0ತೆ ಕಡತ ತೆಗೆ, ಉಳಿಸು, ಮುದ್ರಿಸು ಇತ್ಯಾದಿ ಆದೇಶಗಳನ್ನು ಜಾರಿಗೊಳಿಸುವ ಗುಂಡಿಗಳು ಮತ್ತು ಪಠ್ಯ ಸಂಪಾದನೆಗೆ ಅಗತ್ಯವಾದ ಆಯ್ಕೆಗಳಿರುತ್ತವೆ.

**ಖಾಲಿ ಪ್ರಸ್ತುತಿಯಲ್ಲಿ ಜಾರುಫಲಕ ತಯಾರಿಕೆ:**
ಈ ಮೊದಲೇ ವಿವರಿಸಿರುವಂತೆ ಪವರ್ ಪಾಯಿಂಟ್‌ನ ಆರಂಭಿಕ ತೆರೆಯನ್ನು ತೆರೆದು, ಮೂರನೆಯ ಆಯ್ಕೆಯಾದ ಖಾಲಿ ಪ್ರಸ್ತುತಿ ಆಯ್ಕೆಯನ್ನು ಆಯ್ದು ಕ್ಲಿಕ್ಕಿಸಿದಾಗ ಕೆಳಗಿನ ತೆರೆಯು ತೆರೆದುಕೊಳ್ಳುತ್ತದೆ. ಆಗ ಕಾಣಿಸುವ 12 ಸಿದ್ಧವಿನ್ಯಾಸ ಪುಟಗಳಲ್ಲಿ ಸೂಕ್ತವಾದುದನ್ನು ಆರಿಸಿಕೊಂಡು ಜಾರುಫಲಕ ತಯಾರಿಸಬಹುದು. ಹಾಗಲ್ಲದೆ ಖಾಲಿ ಸಿದ್ಧವಿನ್ಯಾಸ ಪುಟವನ್ನು ಆರಿಸಿಕೊಂಡರೆ ಅದರಲ್ಲಿ ಬೇಕಾದ ಜಾಗದಲ್ಲಿ ಪಠ್ಯ ಚೌಕಗಳನ್ನು ಅಳವಡಿಸಿಕೊಂಡು ಪಠ್ಯ ನಮೂದಿಸಬಹುದು.

**ಪಠ್ಯ ಚೌಕಗಳನ್ನು ಅಳವಡಿಸುವ ವಿಧಾನ:**
ಮೇಲೆ ಹೇಳಿದ ವಿಧಾನದಲ್ಲಿ ಪವರ್ ಪಾಯಿಂಟ್ ತಂತ್ರಾಂಶದ ಜಾರುಫಲಕ ತಯಾರಿಕೆಯಲ್ಲಿ ದೊರೆಯವ ಖಾಲಿ ಪುಟವನ್ನು ಪಡೆದುಕೊಳ್ಳಿ.

**ಹಂತ 1.**: ಪರಿವಿಡಿ ಪಟ್ಟಿಕೆಯ ನೋಟ ಪರಿವಿಡಿ (view)ಯನ್ನು ಕ್ಲಿಕ್ಕಿಸಿ. ಅಲ್ಲಿ ಕಾಣುವ ಉಪಕರಣ ಪಟ್ಟಿಕೆಗಳು (Toolbars)ಉಪಪರಿವಿಡಿಯ ಚಿತ್ರರಚನಾ ಉಪಕರಣ ಆಯ್ಕೆಯನ್ನು ಆರಿಸಿಕೊಳ್ಳಿ.(ಯಾವುದೇ ಉಪಕರಣ ಪಟ್ಟಿಕೆಯ ಮೇಲೆ ಮೌಸ್‌ನ ಬಲಗುಂಡಿಯನ್ನು ಒತ್ತಿದಾಗಲೂ ಈ ಉಪಪರಿವಿಡಿ ದೂರೆಯುತ್ತದೆ.)

**ಹಂತ 2**: ಆಗ ಸ್ಥಿತಿ ಪಟ್ಟಿಕೆಯ ಮೇಲೆ ಚಿತ್ರರಚನಾ ಉಪಕರಣ ಪಟ್ಟಿಕೆಯೂ ಕಾಣಿಸುತ್ತದೆ. ಅದರಲ್ಲಿ ಲಭ್ಯವಿರುವ ಪಠ್ಯ ಚೌಕ ಆಯ್ಕೆಯನ್ನು ಕ್ಲಿಕ್ಕಿಸಿ.(ಸೂಚಕದ ಆಕಾರ ಬದಲಾಗುವುದನ್ನು ಗಮನಿಸಿ)

**ಹಂತ 3:** ಸೂಚಕವನ್ನು ನಿಮಗೆ ಬೇಕಾದ ಚೌಗದಲ್ಲಿರಿಸಿ ಮೌಸ್‌ನ ಎಡಗುಂಡಿಯನ್ನು ಒತ್ತಿ ಹಿಡಿದು ಎಳೆದಾಗ ಪಠ್ಯ ಚೌಕ ಮೂಡುತ್ತದೆ.

**ಹಂತ 4:** ಚೌಕದ ಒಳಗೆ ಪಠ್ಯ ನಮೂದಿಸ ಬಹುದು. ಪಠ್ಯ ನಮೂದಿಸಿದಂತೆ ಚೌಕದ ಗಾತ್ರ ಹಿಗ್ಗುತ್ತದೆ. ಅಕ್ಷರ ಶೈಲಿ, ಬಣ್ಣ ಮತ್ತಿತರ ಗುಣಗಳನ್ನು ಮೈಕ್ರೋಸಾಫ್ಟ್‌ನ ಬೇರೆ ಅನ್ವಯಿಕಗಳಲ್ಲಿ ಬದಲಿಸುವಂತೆಯೇ ವಿನ್ಯಾಸ

ಪರಿವಿಡಿಯ ಉಪಕರಣಗಳನ್ನು ಬಳಸಿ ಬದಲಿಸಬಹುದು. ವಿನ್ಯಾಸ ಪರಿವಿಡಿಯ ಅಕ್ಷರಶೈಲಿ ಆಯ್ಕೆಯನ್ನು ಕ್ಲಿಕ್ಕಿಸಿದಾಗ ಕೆಳಗಿನ ಸಂವಾದ ಚೌಕ ಮೂಡುತ್ತದೆ.

**ಹಂತ 5:**: ಪಠ್ಯ ನಮೂದಿಸಿದ ಅನಂತರ ಸೂಚಕವನ್ನು ಪಠ್ಯ ಚೌಕ ಹೊರಗಡೆ ತಂದು ಕ್ಲಿಕ್ಕಿಸಿದಾಗ ಪಠ್ಯವು ಜಾರುಫಲಕ ಕಾಣಿಸುವ ಹಾಗೆ ಕಾಣಿಸುತ್ತದೆ. ಪಠ್ಯದಲ್ಲಿ ಬದಲಾವಣೆ ಮಾಡಬೇಕಾದರೆ ಆ ಪಠ್ಯದ ಮೇಲೆ ಕ್ಲಿಕ್ಕಿಸಿ. ಪಠ್ಯ ಚೌಕ ಮತ್ತೆ ತೆರೆದುಕೊಳ್ಳುತ್ತದೆ. ಮೈಕ್ರೋಸಾಫ್ಟ್‌ನ ಬೇರೆ ಆನ್ವಯಿಕಗಳಲ್ಲಿ ಬದಲಿಸುವಂತೆಯೇ ಪಠ್ಯ ಚೌಕದ ಸ್ಥಾನ, ಗಾತ್ರಗಳನ್ನು ಬದಲಿಸಬಹುದು. ಪಠ್ಯಚೌಕವ'ನ್ನು ಸಂಪೂರ್ಣವಾಗಿ ಅಳಿಸಲು(**delete**) ಪಠ್ಯ ಚೌಕದ ಅಂಚಿನ ಮೇಲೆ ಕ್ಲಿಕ್ಕಿಸಿ ಅಳಿಸು ಗುಂಡಿಯ'ನ್ನು ಒತ್ತಿ.

ಜಾರುಫಲಕ **ವಿನ್ಯಾಸ ಆಯ್ಕೆ:**

ಪರಿವಿಡಿಯಲ್ಲಿರುವ ಜಾರುಫಲಕ ಬಣ್ಣ ಕ್ರಮ ಆಯ್ಕೆಯನ್ನು ಆರಿಸಿಕೊಂಡರೆ ಆಯ್ಕೆಗಳ ಸಹಾಯದಿಂದ ಜಾರುಫಲಕದ ವಿವಿಧ ಭಾಗಗಳ ಬಣ್ಣಗಳನ್ನು ಬದಲಿಸಬಹುದು.




ಜಾರುಫಲಕ **ಪ್ರದರ್ಶನ**

ತಯಾರಿಸಿ ಉಳಿಸಿರುವ ಕಡತವನ್ನು ತೆಗೆದು ಪವರ್ ಪಾಯಿಂಟ್ ಪ್ರದರ್ಶನ ಕಿಟಕಿಯಲ್ಲಿ ತೆರೆಯ ಕೆಳಗೆ ಎಡ ಭಾಗದಲ್ಲಿರುವ ಜಾರುಫಲಕ ಪ್ರದರ್ಶನ **Slide Show Button** ಮೇಲೆ ಕ್ಲಿಕ ಮಾಡಿ.
ಜಾರುಫಲಕ **Full** ತೆರೆಯಲ್ಲಿ ಕಾಣಿಸುತ್ತದೆ.

**ನೀವು ಪರರಿಗೆ ಮಾಡಿದ ಉಪಕಾರ ಮರೆಯಿರಿ; ಆದರೆ ನಿಮಗೆ ಪರರು ಮಾಡಿದ ಉಪಕಾರ ಎಂದಿಗೂ ಮರೆಯಬೇಡಿ:– ಜೆಲಾಲ್**